**<u>ಪ್ರಧಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ.  451/2022**

| | | | |
|---|---|---|---|
| **ಹೆಸರು** | **:** | **ಅವಿನಾಶ** | |
| **ತಂದೆಯ ಹೆಸರು** | **:** | **ದಯಾನಂದರಾವ** | DW-2 |
| **ವಯಸ್ಸು** | **:** | **33 ವರ್ಷ** | **ದಿನಾಂಕಃ 29-09-2025** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಐನಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಆರೋಪಿತರ ಪರವಾಗಿ ಶ್ರೀ NHR ವಕೀಲರಿಂದಃ</u>**

ದಿನಾಂಕ 05-10-2021 ರಂದು 1ನೇ ಆರೋಪಿ ಐನಾಪುರ ಗ್ರಾಮದಲ್ಲಿರುವ ನನ್ನ ಜಮೀನು ಆದ ಸ.ನಂ. 184ರಲ್ಲಿ ಸೊಯಾಬೀನ ರಾಶಿಗೆ ಬಂದಿದ್ದರು. ಸದರಿ 1ನೇ ಆರೋಪಿ ಬೆಳಗ್ಗೆ 7 ಗಂಟೆಯಿಂದ 8 ರಿಂದ 8.30 ಗಂಟೆ ಸುಮಾರಿಗೆ ನಮ್ಮ ಜಮೀನಿನಲ್ಲಿದ್ದರು. ಬೆಳಗ್ಗೆ 8.30 ಗಂಟೆ ಸುಮಾರಿಗೆ 1ನೇ ಆರೋಪಿಗೆ ಪೋಲಿಸರಿಂದ ಫೋನ ಬಂದಿತ್ತು. 1ನೇ ಆರೋಪಿ ನನಗೆ ತಿಳಿಸಿದ್ದು ಏನೆಂದರೆ ನನ್ನ ಸಂಬಂಧಿಕರ ಮಧ್ಯ ಜಗಳವಾಗಿರುತ್ತದೆ ಆದ್ದರಿಂದ ಪೋಲಿಸರು ರಾಜೀ ಸಂಧಾನ ಮಾಡಲು ಬಂದಿದ್ದಾರೆ ಎಂದು ತಿಳಿಸಿದ್ದಕ್ಕೆ ನಾವು ರಾಶಿ ಮಾಡುವುದನ್ನು ನಿಲ್ಲಿಸಿರುತ್ತೇವೆ. ನಂತರ ಬೆಳಗ್ಗೆ 9 ಗಂಟೆಗೆ ನಾವು ರಾಶಿ ಮಷಿನನ್ನು ಚಾಲು ಮಾಡಿರುತ್ತೇವೆ. ಆ ದಿನ ಪೋಲಿಸರು ಬೆಳಗ್ಗೆ 11 ರಿಂದ 12 ಗಂಟೆ ಸುಮಾರಿಗೆ ಐನಾಪುರ ಗ್ರಾಮಕ್ಕೆ ಬಂದಿರುತ್ತಾರೆ. ನಂತರ ನಾನು ಮತ್ತು 1ನೇ ಆರೋಪಿ ಮಾಣಿಕ ರೆಡ್ಡಿರವರ ಮನೆಗೆ ಹೋಗಿರುತ್ತೇವೆ. ಆಗ ಪೋಲಿಸರು 1ನೇ ಆರೋಪಿ ಮತ್ತು ಮಾಣಿಕ ರೆಡ್ಡಿರವರ ಮಧ್ಯ ಆದ ಜಗಳವನ್ನು ರಾಜೀ ಸಂಧಾನ ಮಾಡಿರುತ್ತಾರೆ. ರಾಜೀಯಾದ ನಂತರ ನಾವು ನಮ್ಮ ಹೊಲಕ್ಕೆ ಹೋಗಿರುತ್ತಾರೆ.

1ನೇ ಆರೋಪಿ ಹೊಲದಲ್ಲಿದ್ದಾಗ ಪೋಲಿಸ ಠಾಣೆಯಿಂದ 1ನೇ ಆರೋಪಿಗೆ ಕರೆಬಂದಿತ್ತು. ಆಗ ನಾನು ಹೊಲದಲ್ಲಿದ್ದೆ. 1ನೇ ಆರೋಪಿ ನನಗೆ ತಿಳಿಸಿದ್ದೆನೆಂದರೆ ಚಾಸಾ-1ರವರು ನನ್ನ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ ಆದ್ದರಿಂದ ಹೋಗುತ್ತೇನೆ ಎಂದು ತಿಳಿಸಿರುತ್ತಾರೆ. ಚಾಸಾ-1ರವರ ಮನೆಯಲ್ಲಿ ಶೌಚಾಲಯವಿದ್ದು ಚಾಸಾ-1ರವರು ಆರೋಪಿತರ ವಿರುದ್ದ ಸುಳ್ಳು ಆಪಾದನೆ ಮಾಡಿರುತ್ತಾರೆ. ಚಾಸಾ-1ರವರ ಮನೆ ಮತ್ತು ಆರೋಪಿತರ ಮನೆ 400-500 ಮೀಟರ ದೂರಿದಲ್ಲಿದೆ. ಚಾಸಾ-1ರವರ ಮನೆಯ 400-500 ಮೀಟರ ಅಂತರದಲ್ಲಿ ಸಾರ್ವಜನಿಕ ಶೌಚಾಲಯ ಸಹ ಇದೆ. ಸದರಿ ಶೌಚಾಲಯ ಆರೋಪಿತರ ಮನೆ ಹಿಂದೆ ನಾಲಾದ ಹತ್ತಿರವಿದೆ. ಮಾಣಿಕ ರೆಡ್ಡಿರವರ ಮೊಮ್ಮಗಳಿಗೆ ಚಾಸಾ-1ರವರ ಮಗನಾದ ಕೃಷ್ಣರವರೊಂದಿಗೆ

ಮದುವೆ ಮಾಡಿರುತ್ತಾರೆ. ಮಾಣಿಕ ರೆಡ್ಡಿರವರ ಮೊಮ್ಮಗಳ ಹೆಸರು ನನಗೆ ಗೊತ್ತಿಲ್ಲ.

1ನೇ ಆರೋಪಿ ಮಾಜಿ ಸೈನಿಕರಿರುತ್ತಾರೆ.

**ವಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**